ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 22-6-2017

# ಪತ್ರಿಕಾ ಪ್ರಕಟಣೆ

## 2017–18 ನೇ ಸಾಲಿನಲ್ಲಿ ಪಶುಭಾಗ್ಯ ಯೋಜನೆ ಅನುಷ್ಠಾನ

**ಬೆಂಗಳೂರು, ಜೂನ್ 22 (ಕರ್ನಾಟಕ ವಾರ್ತೆ)**

ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆ ಕಾರ್ಯಕ್ರಮವಾದ ಪಶುಭಾಗ್ಯ ಯೋಜನೆಯನ್ನು 2017–18 ನೇ ಸಾಲಿನಲ್ಲಿ ಅನುಷ್ಟಾನಗೊಳಿಸಲು ಬೆಂಗಳೂರು ನಗರ ಜಿಲ್ಲೆಗೆ ಒಟ್ಟು 225– ಹೈನುಗಾರಿಕೆ ಘಟಕ, 23 – ಕುರಿ/ಮೇಕೆ ಘಟಕ, 09–ಹಂದಿ ಘಟಕ, 06–ಕೋಳಿ ಘಟಕಗಳಿಗೆ ಅರ್ಹ ಫಲಾನುಭವಿಗಳನ್ನು ಆಯ್ಕೆಮಾಡಿ ಕಾರ್ಯಕ್ರಮ ಅನುಷ್ಠಾನಗೊಳಿಸಲು ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ರವರಿಂದ ಕುರಿ/ಮೇಕೆ ಸಾಕಾಣಿಕೆಗೆ ಒಟ್ಟು 53 ಗುರಿಗಳನ್ನು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಹಕಾರ ಘಟಕ ಸ್ಥಾಪಿಸಲು ಬೆಂಗಳೂರು ನಗರ ಜಿಲ್ಲೆಗೆ 05 ಗುರಿಗಳನು ನೀಡಿದ್ದು, ತತ್ಸಂಬಂಧ ಅರ್ಜಿಗಳನ್ನು ಆಹ್ವಾನಿಸಿದೆ.

ಈ ಯೋಜನೆ ಬೇಡಿಕೆ ಆಧಾರಿತ ಯೋಜನೆಯಾಗಿ 2016–17 ನೇ ಸಾಲಿನಲ್ಲಿ ಉಳಿದ ಫಲಾನುಭವಿ ಪಟ್ಟಿ ಒಳಗೊಂಡಂತೆ ಮೊದಲು ಬಂದವರಿಗೆ ಮೊದಲ ಆದ್ಯತೆ ಮೇರೆಗೆ ಇಲಾಖೆಯಲ್ಲಿ ಲಭ್ಯವಿರುವ ಅನುದಾನದಲ್ಲಿ ಅನುಷ್ಠಾನಗೊಳಿಸಲಾಗುವುದು.

ಭೂರಹಿತ ಫಲಾನುಭವಿಗಳಿಗೆ, ವಲಸೆ ಬಂದು ನೆಲೆಸಿದವರಿಗೆ ಮೊದಲ ಅಧ್ಯತೆ ನೀಡಲಾಗುವುದು. ಅಮೃತ ಯೋಜನೆಯಡಿಯಲ್ಲಿ (ಹಸು ಘಟಕ) ವಿಧವೆಯರಿಗೆ/ದೇವದಾಸಿಯರಿಗೆ/ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ/ಸಂಕಷ್ಟಕ್ಕೊಳಗಾದ ಮಹಿಳೆಯರಿಗೆ ಮಾತ್ರ ಅವಕಾಶವಿರುತ್ತದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಆಯಾ ಘಟಕ ವೆಚ್ಚದ ಶೇ 50 ರಷ್ಟು ಸಹಾಯಧನವನ್ನು ಹಾಗೂ ಇತರೆ ಫಲಾನುಭವಿಗಳಿಗೆ ಶೇ 25 ರಷ್ಟು ಸಹಾಯಧನವನ್ನು ಸಾಲ ಮಂಜೂರು ಮಾಡುವ ಬ್ಯಾಂಕುಗಳ ಮುಖಾಂತರ ಪಾವತಿಸಲಾಗುವುದು.

ಯೋಜನೆಯ ಒಟ್ಟು ಫಲಾನುಭವಿಗಳಲ್ಲಿ ಶೇ 33 ರಷ್ಟು ಮಹಿಳೆಯರಿಗೆ, ಶೇ 3 ರಷ್ಟು ಅಂಗವಿಕಲರಿಗೆ, ಶೇ 5 ರಷ್ಟು ಅಲ್ಪಸಂಖ್ಯಾತರಿಗೆ ಮೀಸಲಿರಿಸಲಾಗಿದೆ. ಪಶುಭಾಗ್ಯ ಯೋಜನೆಯ ಎಲ್ಲಾ ಫಲಾನುಭವಿಗಳಿಗೆ ತರಬೇತಿ ಪಡೆಯುವುದನ್ನು ಕಡ್ಡಾಯಗೊಳಿಸಿದೆ ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ದನ/ಕುರಿ/ಹಂದಿ ದೊಡ್ಡಿ ನಿರ್ಮಿಸಲು ಅವಕಾಶವಿದೆ.

ಈ ಯೋಜನೆಯಡಿಯಲ್ಲಿ ಅರ್ಜಿ ಸಲ್ಲಿಸಲು ಇಚ್ಚಿಸುವ ಫಲಾನುಭವಿಗಳು ಯೋಜನೆಯ ಹೆಚ್ಚಿನ ವಿವರಗಳಿಗೆ ಮತ್ತು ಅರ್ಜಿ ನಮೂನೆಗಾಗಿ ಆಯಾ ತಾಲ್ಲೂಕಿನ/ವ್ಯಾಪ್ತಿಯ ಪಶುಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕರು / ಪಶುವೈದ್ಯಾಧಿಕಾರಿಗಳು / ಪಶುವೈದ್ಯಕೀಯ ಪರೀಕ್ಷಕರು, ಪಶು ಆಸ್ಪತ್ರೆ / ಪಶುಚಿಕಿತ್ಸಾಲಯ /ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರದಿಂದ ಪಡೆದು ಜುಲೈ 14 ರೊಳಗೆ ಭರ್ತಿಮಾಡಿದ ಅರ್ಜಿಯನ್ನು ಸಲ್ಲಿಸಬಹುದಾಗಿದೆ ಎಂದು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ನಗರ ಜಿಲ್ಲೆ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಸ್‌ಎಂ:ಜೆಡಿ:ಜಿಪಿಆರ್.

# ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

**ಬೆಂಗಳೂರು, ಜೂನ್ 22 (ಕರ್ನಾಟಕ ವಾರ್ತೆ)**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಶುಶ್ರೂಷಕರು (ಡಿಪ್ಲೋಮಾ) –889 ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಜಿಗಳನ್ನು ಆನ್–ಲೈನ್ ಮೂಲಕ ದಿನಾಂಕ: 27–06–2017 ರಿಂದ 26–07–2017 ರವರೆಗೆ ಸಲ್ಲಿಸಬಹುದು. ಈ ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ, ವಯೋಮಿತಿ, ಮೀಸಲಾತಿ, ವರ್ಗೀಕರಣ ಮತ್ತು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಶುಶ್ರೂಷಕರು (ಡಿಪ್ಲೋಮಾ) ಇವರುಗಳಿಗೆ ಕೃಪಾಂಕ ಮತ್ತು ವಯೋಮಿತಿ ಸಡಿಲಿಕೆ ಹಾಗೂ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ವಿಧಾನ, ಶುಲ್ಕ ಪಾವತಿಸುವ ವಿಧಾನ ಇತ್ಯಾದಿ

ವಿವರಗಳನ್ನು ವೆಬ್‌ಸೈಟ್ www.karhfw.gov.in ನಲ್ಲಿ ವೀಕ್ಷಿಸಬಹುದಾಗಿದೆ ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

# ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟ

**ಬೆಂಗಳೂರು, ಜೂನ್ 22 (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಗವು ಕರ್ನಾಟಕ ಕೊಳಗೇರಿ ಮಂಡಳಿಯಲ್ಲಿ ಕಿರಿಯ (ಸಿವಿಲ್) 08=01 (ಹೈಕ) ಅಭಿಯಂತರರು ಮತ್ತು ಕೃಷಿ ಮಾರಾಟ ಇಲಾಖೆಯಲ್ಲಿ ಕಿರಿಯ ಅಭಿಯಂತರರು (ಸಿವಿಲ್) 02 ಹುದ್ದೆಗಳಿಗೆ ಆಯೋಗದ ಅಂತರ್ಜಾದಲ್ಲಿ ದಿನಾಂಕ: 21–06–2017 ರಂದು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ. ಆಕ್ಷೇಪಣೆ ಸಲ್ಲಿಸುವವರು 7 ದಿನಗಳೊಳಗೆ ಸಲ್ಲಿಸಬೇಕು.

ಎಸ್‌ಎಂ:ಜೆಡಿ:ಜಿಪಿಆರ್.

# ಅರ್ಹ ಅಭ್ಯರ್ಥಿಗಳ ಮೂಲ ದಾಖಲಾತಿ ಪರಿಶೀಲನೆ

**ಬೆಂಗಳೂರು, ಜೂನ್ 22 (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಗವು ಪೌರಾಡಳಿತ ನಿರ್ದೇಶನಾಲಯದಲ್ಲಿ ಮಹಾನಗರಪಾಲಿಕೆಗಳಲ್ಲಿ ಕಾಮಗಾರಿ ನಿರೀಕ್ಷಕರು 167+44 ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳ ಮೂಲ ದಾಖಲಾತಿಗಳ ಪರಿಶೀಲನೆಯನ್ನು 2ನೇ ಹಂತದಲ್ಲಿ ಆಯೋಗವು ಕೇಂದ್ರ ಕಚೇರಿಯಲ್ಲಿ ಜೂನ್ 28 ರಂದು ಬೆಳಿಗ್ಗೆ 9.31 ಗಂಟೆಗೆ ನಿಗದಿಪಡಿಸಿದೆ.

ಮೂಲ ದಾಖಲೆಗಳ ಪರಿಶೀಲನೆಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಈಗಾಗಲೇ ಆಯೋಗದ ಅಂತರ್ಜಾಲದಲ್ಲಿ ಪ್ರಕಟಿಸಲಾಗಿದ್ದು, ಸೂಚನಾಪತ್ರಗಳನ್ನು ರವಾನಿಸಲಾಗಿದೆ ಹಾಗೂ ಅಭ್ಯರ್ಥಿಗಳು ತಮ್ಮ ನೋಂದಣಿ ಸಂಖ್ಯೆ ಮತ್ತು ಜನ್ಮ ದಿನಾಂಕವನ್ನು ನಮೂದಿಸಿ ಆಯೋಗದ ಅಂತರ್ಜಾಲ "http://kpsc.kar.nic.in" ಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದೆಂದು ಸೂಚಿಸಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ 7337830894 ಅನ್ನು ಸಂಪರ್ಕಿಸಬಹುದು.

ಎಸ್‌ಎಂ:ಜೆಡಿ:ಜಿಪಿಆರ್.

# ಪಡಿತರ ಚೀಟಿದಾರರಿಗೆ ವಿವಿಧ ಯೋಜನೆಗಳು

**ಬೆಂಗಳೂರು, ಜೂನ್ 22, (ಕರ್ನಾಟಕ ವಾರ್ತೆ)**

ಸಹಕಾರ ಯೋಜನೆವತಿಯಿಂದ ಪಡಿತರ ಚೀಟಿದಾರರಿಗೆ ನೀಡುವ ಸೇವೆಗಳನ್ನು ಎಲ್ಲಾ ಮಾದರಿಯ ಪಡಿತರ ಚೀಟಿದಾರರಿಗೆ ನಿಯಮಾನುಸಾರ ಅರ್ಜಿ ಸಲ್ಲಿಸಿ ಪಡೆದುಕೊಳ್ಳಬೇಕೆಂದು ಶಾಸಕ ಹಾಗೂ ಮಾಜಿ ಸಚಿವ ಕಿಮ್ಮನೆ ರತ್ನಾಕರ ಅವರು ತಿಳಿಸಿದ್ದಾರೆ.

ಸಹಕಾರ ಯೋಜನೆಯಡಿಯಲ್ಲಿ ಎಲ್ಲಾ ಮಾದರಿಯ ಪಡಿತರ ಚೀಟಿದಾರಿಗೆ ಪ್ರತಿ ತಿಂಗಳು ಅವರ ವ್ಯಾಪ್ತಿಯ ನ್ಯಾಯಬೆಲೆ ಅಂಗಡಿಗಳಿಂದ ಯಾವ ದಿನಾಂಕದಲ್ಲಿ ಯಾವ ಆಹಾರ ಸರಕುಗಳು ಎಷ್ಟು ಪ್ರಮಾಣದಲ್ಲಿ ನೀಡಲಾಗುತ್ತದೆ ಎಂದು ಮಾಹಿತಿ ದೂರವಾಣಿಯ ಮೂಲಕ ಮತ್ತು ಪ್ರತಿನಿಧಿಗಳ ಮೂಲಕ ನೀಡಲಾಗುತ್ತದೆ.

ಪಡಿತರ ಚೀಟಿದಾರರಿಗೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರದ ಸವಲತ್ತುಗಳ ಜೊತೆಗೆ ಸರ್ಕಾರೇತರ ಸಂಸ್ಥೆಗಳಿಂದ ನೀಡುವ ಶಿಕ್ಷಣ, ಉದ್ಯೋಗ, ಸಾಲ ಸೌಲಭ್ಯ, ಆರೋಗ್ಯ, ಕಾನೂನು ಪಡಿತರ ಚೀಟಿಯಲ್ಲಿ ಗುರುತಿಸಿರುವ ಸದಸ್ಯರಿಗೆ ಸ್ವ ಉದ್ಯೋಗ ತರಬೇತಿಯನ್ನು ನೀಡಲಾಗುತ್ತದೆ ಹಾಗೂ ಈಗಾಗಲೇ ಇತರೆ ಉದ್ದಿಮೆಗಳನ್ನು ನಡೆಸುತ್ತಿದ್ದರೆ ವಿವಿದ್ಧೋದ್ದೇಶಗಳಿಗೆ ನೀಡುವ ಸಾಲ ಸೌಲಭ್ಯದ ಬಗ್ಗೆ ಮಾಹಿತಿಯನ್ನು ನೀಡಿ ನೆರವನ್ನು ನೀಡುವುದರ ಜೊತೆಗೆ ಮಾರುಕಟ್ಟೆ ವ್ಯವಸ್ಥೆಯನ್ನು ಮಾಡಲಾಗುತ್ತದೆ.

ಪಡಿತರ ಚೀಟಿಯಲ್ಲಿ ಗುರುತಿಸಿರುವ ಸದಸ್ಯರಿಗೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ನೇಮಕಾತಿ ಪರೀಕ್ಷೆಗಳ ಅಧಿಸೂಚನೆಯ ಮಾಹಿತಿಯನ್ನು ನೀಡಿ ಅಶಕ್ತ ಅಭ್ಯರ್ಥಿಗಳಿಗೆ ಆನ್‌ಲೈನ್ ಮತ್ತು ಪೋಸ್ಟಲ್ ಮೂಲಕ ಉತ್ತಮ ತರಬೇತಿಗಳನ್ನು ನೀಡಿ ಅಧ್ಯಯನ ಸಾಮಗ್ರಿಗಳನ್ನು ಒದಗಿಸಲಾಗುತ್ತದೆ.

ಪಡಿತರ ಚೀಟಿಯಲ್ಲಿ ಗುರುತಿಸಿರುವ ಮಕ್ಕಳಿಗೆ ಪ್ರವೇಶ ಪರೀಕ್ಷೆ, ಪಬ್ಲಿಕ್ ಪರೀಕ್ಷೆ, ಮೊರಾರ್ಜಿ ದೇಸಾಯಿ, ನವೋದಯ ವಸತಿ ಶಾಲೆ ಪರೀಕ್ಷೆಗಳಿಗೆ ಆನ್‌ಲೈನ್ ಮತ್ತು ಪೋಸ್ಟಲ್ ಮೂಲಕ ಉತ್ತಮ ತರಬೇತಿಗಳನ್ನು ನೀಡಿ ಸ್ಟಡಿ ಮೆಟಿರಿಯಲ್‌ಗಳನ್ನು ಒದಗಿಸಲಾಗುತ್ತದೆ. ಪ್ರತಿದಿನ ಶಿಕ್ಷಣ, ಕಾನೂನು, ಆರೋಗ್ಯ, ಉದ್ಯೋಗ ಇತರೆ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸೂಕ್ತ ತಜ್ಞರ ಜೊತೆ ಸಮಾಲೋಚಿಸಲು ಅವಕಾಶವಿರುತ್ತದೆ.

ಸಹಕಾರ ಯೋಜನೆಯಲ್ಲಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಎಲ್ಲಾ ಇಲಾಖೆಗಳ ಪ್ರತಿದಿನದ ಕಾರ್ಯಕ್ರಮಗಳ ವಿವರಗಳು, ಪ್ರಮುಖ ಪ್ರಕಟಣೆಗಳು ಮತ್ತು ಯೋಜನೆಗಳ ಮಾಹಿತಿಯನ್ನು ನೀಡಿ ಸಹಕಾರ ಯೋಜನೆ ಗುರುತಿನ ಚೀಟಿ ಹೊಂದಿರುವ ಪಡಿತರ ಚೀಟಿದಾರರಿಗೆ ಯೋಜನೆಗಳು ಅನ್ವಯಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ. ಎಲ್ಲಾ ಮಾದರಿಯ ಪಡಿತರ ಚೀಟಿದಾರರು ಆರ್ಥಿಕ, ಶೈಕ್ಷಣಿಕ, ಕಾನೂನು, ಆರೋಗ್ಯ, ಉದ್ಯೋಗ

ಇತರೆ ಕ್ಷೇತ್ರಗಳಲ್ಲಿ ಅಭಿವೃದ್ಧಿಹೊಂದಲು ನೆರವಾಗುವುದು ಸಹಕಾರ ಯೋಜನೆಯ ಕಾರ್ಯಕ್ರಮವಾಗಿದೆ. ಹೆಚ್ಚಿನ ಮಾಹಿತಿಯನ್ನು ಸಹಕಾರ ಯೋಜನೆ ಮಾಹಿತಿ ದೂರವಾಣಿ ಸಂಖ್ಯೆ 8880099290 ಇ–ಮೇಲ್ sahakarayojkar@gmail.com ನಿಂದ ಪಡೆಯಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# <u>ಹರಾಜು</u>

**ಬೆಂಗಳೂರು, ಜೂನ್ 22, (ಕರ್ನಾಟಕ ವಾರ್ತೆ)**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಎರಡು ಅಂಬಾಸಿಡರ್ ಕಾರುಗಳನ್ನು ಹೇಗಿದೆಯೋ ಹಾಗೆ ದಿನಾಂಕ 28- 06-2017 ರಂದು ಬೆಳಿಗ್ಗೆ 11.30 ಗಂಟೆಗೆ ನಂ. 17, ಭಗವಾನ್ ಮಹಾವೀರ ರಸ್ತೆ, (ಇನ್ ಫೆಂಟ್ರಿ ರಸ್ತೆ) ಬೆಂಗಳೂರು -560001 ಇಲ್ಲಿ ಟೆಂಡರ್ -ಕಂ-ಬಹಿರಂಗ ಹರಾಜು ಹಮ್ಮಿಕೊಂಡಿದೆ.

**ವಿಲೇವಾರಿ ಮಾಡಲಿರುವ ವಾಹನಗಳ ವಿವರಗಳು**

| ಕ್ರ.ಸಂ. | ವಾಹನಸಂಖ್ಯೆ | ಷರಾ |
|---|---|---|
| 1) | **ಕೆಎ-01-ಜಿ-3192, ಅಂಬಾಸಿಡರ್ ಕಾರು** | **ನಿರುಪಯುಕ್ತ ಎಂದು ಘೋಷಿಸಲಾಗಿದೆ** |
| 2) | **ಕೆಎ-01-ಜಿ-3443 ಅಂಬಾಸಿಡರ್ ಕಾರು** | **ನಿರುಪಯುಕ್ತ ಎಂದು ಘೋಷಿಸಲಾಗಿದೆ** |

ಒಂದು ಲಘು(ಕಾರು) ವಾಹನಕ್ಕೆ ರೂ. 5,000/- (ಐದು ಸಾವಿರ ರೂಪಾಯಿಗಳು ಮಾತ್ರ)ಗಳಂತೆ ಮುಂಗಡ ಠೇವಣಿ ಇಡಬೇಕಾಗಿರುತ್ತದೆ. ಒಂದೊಂದು ವಾಹನಕ್ಕೆ ಪ್ರತ್ಯೇಕವಾಗಿ ಠೇವಣಿ ಇ.ಎಂ.ಡಿ. ಹಣವನ್ನು ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು ಇವರ ಹೆಸರಿನಲ್ಲಿ ಡಿಮ್ಯಾಂಡ್ ಡ್ರಾಫ್ಟ್ ಪಡೆದು ಟೆಂಡರ್ ಆಫರ್ ಮತ್ತು ಡಿ.ಡಿ.ಯನ್ನು ಲಕೋಟೆಗಳಲ್ಲಿ ಮೊಹರ್ ಮಾಡಿ ದಿನಾಂಕ 27-06-2017 ರಂದು ಸಾಯಂಕಾಲ 4.00 ರ ಒಳಗಾಗಿ ನಿರ್ದೇಶಕರು, ನಂ. 17, ಭಗವಾನ್ ಮಹಾವೀರದ ರಸ್ತೆ, (ಇನ್ ಫೆಂಟ್ರಿ ರಸ್ತೆ) ಬೆಂಗಳೂರು -560001 ಇವರಿಗೆ ಕಳುಹಿಸಬೇಕು. ಹೀಗೆ ಕಳುಹಿಸುವ ಮೊಹರಾದ ಲಕೋಟೆಯ ಮೇಲೆ "ವಾಹನಗಳ ಹರಾಜಿನ ಟೆಂಡರ್" ಎಂದು ನಮೂದಿಸತಕ್ಕದ್ದು. ತಡವಾಗಿ ಬಂದ ಟೆಂಡರ್ ಗಳನ್ನು ಪರಿಗಣಿಸುವುದಿಲ್ಲ.

ನಿರುಪಯುಕ್ತ 02 ಕಾರುಗಳನ್ನು ದಿನಾಂಕ 28-06-2017 ರಂದು ಬೆಳಿಗ್ಗೆ 11.30 ಗಂಟೆ ನಂತರ ಕಛೇರಿಯ ಆವರಣದಲ್ಲಿ ಬಹಿರಂಗ ಹರಾಜು ಮಾಡಲಾಗುವುದು.

ಬಹಿರಂಗ ಹರಾಜಿನಲ್ಲಿ ಭಾಗವಹಿಸುವವರು ಮೇಲೆ ನಿಗದಿಪಡಿಸಿರುವಂತೆ ಒಂದೊಂದು ವಾಹನಕ್ಕೆ ಪ್ರತ್ಯೇಕ ಮುಂಗಡ ಠೇವಣಿ ರೂ. 5000/- ಹಣವನ್ನು ನಗದಾಗಿ ಅಥವಾ ಡಿ.ಡಿ.ಯ ಮೂಲಕ ಇಲಾಖೆಯ ಲೆಕ್ಕಪತ್ರಾದಿಕಾರಿ ಅವರಲ್ಲಿ ದಿನಾಂಕ:28-06-2017 ರಂದು ಬೆಳಿಗ್ಗೆ 10 ರಿಂದ 11 ಗಂಟೆಯೊಳಗೆ ಹಣ ಪಾವತಿ ಮಾಡಿದವರು ಮಾತ್ರ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಅರ್ಹರು. ಬಹಿರಂಗ ಹರಾಜು ಪ್ರಕ್ರಿಯೆ ಮುಗಿದ ನಂತರ ಮೊಹರಾದ ಟೆಂಡರುಗಳನ್ನು ತೆಗೆದು ಪರಿಶೀಲಿಸಲಾಗುವುದು.

ಟೆಂಡರ್ ಅಥವಾ ಹರಾಜಿನ ಬಿಡ್ಡುಗಳಲ್ಲಿ ಹೆಚ್ಚಿನ ಬಿಡ್ಡನ್ನು ಅಂಗೀಕರಿಸುವ ಅಥವಾ ನಿರಾಕರಿಸುವ ಹಕ್ಕನ್ನು ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಅವರು ಹೊಂದಿರುತ್ತಾರೆ. ಒಪ್ಪಿಗೆಯಾದ ಬಿಡ್ಡನ್ನು ಟೆಂಡರ್ ದಾರರು ಹಾಗೂ ಬಿಡ್ಡುದಾರರು ಬಿಡ್ಡು ಮಾಡಿದ ಮೊತ್ತ ಮತ್ತು ತೆರಿಗೆ ಸೇರಿಸಿ ಅಂದೇ ಪೂರ್ಣ ಹಣವನ್ನು ಪಾವತಿ ಮಾಡಿ ವಾಹನವನ್ನು ಸುಪರ್ದಿಗೆ ಪಡೆದುಕೊಳ್ಳಬೇಕು. ತಪ್ಪಿದಲ್ಲಿ ಬಿಡ್ಡುದಾರರ/ಟೆಂಡರ್ ದಾರರ ಠೇವಣಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಈ ಹಳೆ ವಾಹನಗಳನ್ನು ಇಲಾಖೆಯ ಆವರಣದಲ್ಲಿ ಕಛೇರಿ ಕಾರ್ಯ ನಿರ್ವಹಿಸುವ ದಿನಗಳಲ್ಲಿ ಕಛೇರಿಯ ವೇಳೆಯಲ್ಲಿ ಪರಿಶೀಲಿಸಬಹುದು.